**ಸಾಕ್ಷಿಯನ್ನು ದಿಃ 05.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

ಟ್ರಯಲರ್ ಗೆ ರೇಡಿಯಮ್ ಇತ್ತು ಎಂದರೆ ಇರಲಿಲ್ಲ ಎನ್ನುತ್ತಾರೆ. ಮುಖ್ಯ ರಸ್ತೆಯಾದ ಕಾರಣ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಮೃತರ ಬೈಕ್ ಗೆ ಹೆಡ್ ಲೈಟ್ ಇತ್ತು. ಹೆಡ್ ಲೈಟ್ ಇದಿದ್ದರೆ 100 ಮೀಟರ್ ವರೆಗೂ ಕಾಣಿಸುತ್ತದೆ ಎಂದರೆ ಸರಿ. ಮೃತರು 30-40 ಕಿ.ಮೀ ವೇಗದಲ್ಲಿ ಹೋಗುತ್ತಿದ್ದರು. ಅವರು ವೇಗವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. 30-40 ರಲ್ಲಿ ಹೋಗುತ್ತಿದ್ದರೆ ಇದ್ದಕ್ಕಿದ್ದ ಹಾಗೆ ಬೈಕ್ ಅನ್ನು ನಿಲ್ಲಿಸಬಹುದು ಎಂದರೆ ಸರಿಯಲ್ಲ. ನನಗಿಂತ ಅವರು 100 ಅಡಿ ದೂರದಲ್ಲಿದ್ದರು. ನಾನು 40-50 ಕಿ.ಮೀ ಸ್ಪೀಡ್ ನಲ್ಲಿ ಹೋಗುತ್ತಿದ್ದೆ. 1 ನೇ ಎದುರುದಾರರಿಗೆ ಅಪಘಾತ ಸ್ಥಳದಲ್ಲಿ ಜಮೀನು ಇತ್ತು ಎಂದರೆ ಸರಿಯಲ್ಲ. ಬೇರೆಯವರ ಮನೆಗಳು ಇತ್ತು ಎನ್ನುತ್ತಾರೆ. ಬೇರೆ ಮನೆಗಳಲ್ಲಿನ ಜನರು ಅಪಘಾತ ನೋಡಿದ್ದರೋ ಇಲ್ಲವೋ ಗೊತ್ತಿಲ್ಲ. ಅಪಘಾತ 7.30 ಕ್ಕೆ ಆಗಿದ್ದು ಬೈಕ್ ಗೆ ಹೆಡ್ ಲೈಟ್ ಇದಿದ್ದರೆ ಎದುರಿನ ವಾಹನ ಕಾಣುತ್ತಿತ್ತು ಎಂದರೆ ಸಾಕ್ಷಿಯು ಕಾಣುತ್ತಿರಲಿಲ್ಲ ಎನ್ನುತ್ತಾರೆ. 1 ನೇ ಎದುರುದಾರರ ನಿರ್ಲಕ್ಷ್ಯತೆ ಇರಲಿಲ್ಲ ಮೃತರೇ ವೇಗವಾಗಿ ವಾಹನ ಚಲಾಯಿಸಿದ ಕಾರಣ ನಿಯಂತ್ರಿಸಲಾಗದೇ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೃತರು ಹೆಲ್ಮೆಟ್ ಧರಿಸಿದ್ದರು. ಟ್ರಾಕ್ಟರ್ ಟ್ರಯಲರ್ 5-6 ಅಡಿ ಇತ್ತು. ಅದು ರಸ್ತೆ ಮಧ್ಯದಲ್ಲಿದ್ದರೇ ರಸ್ತೆ ಸಂಚಾರ ಅಡ್ಡಿಯಾಗುತ್ತಿತ್ತು ಎಂದರೆ ಸರಿ. ನಾನು ಮೃತರಿಗೆ ಪರಿಚಿತನು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಪಡೆಯಲು ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ರಸ್ತೆಯಲ್ಲಿ ಹೋಗದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ರಜಾದಲ್ಲಿದ್ದೆ ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.